Ph. /Fax : 27682035

# ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ವಿ.ಹೆಚ್. ಕಾಂಪ್ಲೆಕ್ಸ್, 1ನೇ ಮಹಡಿ, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562 110, ವೆಬ್‌ಸೈಟ್ : www.biaapa.in

## "ಸ್ವಾಧೀನಾನುಭವ ಪ್ರಮಾಣ ಪತ್ರ"

(ನಮೂನೆ-3)

ದಿನಾಂಕ: 17 MAY 2012

ಸಂ. ಬಿಐಎಎಪಿಎ/ಟಿಪಿ/ಸಿಸಿ/01/2009-10

ವಿಷಯ : ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಹೆಸರಘಟ್ಟ ಹೋಬಳಿ, ಕಡತನಮಲೆ ಗ್ರಾಮದ ಸರ್ವೆ ನಂ. 30, 31, 32, 33, 34, 161 ರಲ್ಲಿ ಒಟ್ಟಾರೆಯಾಗಿ ಅನುಮೋದಿಸಲಾಗಿರುವ ಸಮೂಹ ವಸತಿ ಅಭಿವೃದ್ಧಿ ನಕ್ಷೆಯಲ್ಲಿನ ಪ್ರದೇಶ (ಗ್ರೂಫ್ ಹೌಸಿಂಗ್) ದಲ್ಲಿ ಬರುವ "ಬಿಲ್ಡಿಂಗ್-3 (ಟೈಪ್-ಸಿ), ಬಿಲ್ಡಿಂಗ್-4 (ಟೈಪ್-ಎ), ಬಿಲ್ಡಿಂಗ್-5 (ಟೈಪ್-ಎ) ಮತ್ತು ಕ್ಲಬ್‌ಹೌಸ್" ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ನೀಡಲು ಕೋರಿ ಸಲ್ಲಿಸಿರುವ ಮನವಿ ಪತ್ರ ಬಗ್ಗೆ.

ಉಲ್ಲೇಖ : 1. ತಾವು ಸಲ್ಲಿಸಿರುವ ಅರ್ಜಿ ಸಂಖ್ಯೆ: 1628 ದಿನಾಂಕ: 23-07-2009
2. ಈ ಪ್ರಾಧಿಕಾರದ ಸಮ ಸಂಖ್ಯೆ ಪತ್ರ ದಿನಾಂಕ: 24-07-2009
3. ತಮ್ಮ ಮನವಿ ಪತ್ರ ದಿನಾಂಕ: 02/08-05-2012
4. ಈ ಪ್ರಾಧಿಕಾರದ ಸಮ ಸಂಖ್ಯೆ ಪತ್ರ ದಿನಾಂಕ: 06-05-2012
5. ಅರ್ಜಿದಾರರು ಶುಲ್ಕಗಳನ್ನು ಪಾವತಿಸಿರುವ ದಿನಾಂಕ: 17-05-2012

***********

ಮೇಲ್ಕಂಡ ವಿಷಯ ಸಂಬಂಧ, ಉಲ್ಲೇಖ (1) ರ ಪತ್ರದಲ್ಲಿ ತಾವು ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಹೆಸರಘಟ್ಟ ಹೋಬಳಿ, ಕಡತನಮಲೆ ಗ್ರಾಮದ ಸರ್ವೆ ನಂ. 30, 31, 32, 33, 34, 161 ರಲ್ಲಿ ಒಟ್ಟಾರೆಯಾಗಿ ಅನುಮೋದಿಸಲಾಗಿರುವ ಸಮೂಹ ವಸತಿ ಅಭಿವೃದ್ಧಿ ನಕ್ಷೆಯಲ್ಲಿನ ಪ್ರದೇಶದಲ್ಲಿ ವಸತಿ ಉಪಯೋಗದ ಟೈಪ್-ಎ, ಟೈಪ್-ಬಿ ಮತ್ತು ಟೈಪ್ -ಸಿ ಹಾಗೂ ವಾಣಿಜ್ಯ ಉಪಯೋಗದ 'ಕ್ಲಬ್ ಹೌಸ್' ಕಟ್ಟಡಗಳನ್ನು ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರವನ್ನು ನಿಡಲು ಕೋರಿ ಅರ್ಜಿ ಸಲ್ಲಿಸಿದ ಮೇರೆಗೆ, ಉಲ್ಲೇಖ (2) ರ ಪ್ರಾಧಿಕಾರದ ಪತ್ರದಲ್ಲಿ ನಿಯಮಾನುಸಾರ ಕಟ್ಟಡ ನಕ್ಷೆಗಳಿಗೆ ಅನುಮತಿ ನೀಡಿ, ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗಿರುತ್ತದೆ.

ಉಲ್ಲೇಖ (3) ರ ತಮ್ಮ ಮನವಿ ಪತ್ರದಲ್ಲಿ ಈಗ ಸದರಿ ಅಭಿವೃದ್ಧಿ ನಕ್ಷೆಯ ಪ್ರದೇಶದಲ್ಲಿ ಬರುವ ಕಟ್ಟಡಗಳ ಪೈಕಿ ಪೂರ್ಣವಾಗಿ ಅಭಿವೃದ್ಧಿಗೊಂಡಿರುವ "ಬಿಲ್ಡಿಂಗ್-3 (ಟೈಪ್-ಸಿ), ಬಿಲ್ಡಿಂಗ್-4 (ಟೈಪ್-ಎ), ಬಿಲ್ಡಿಂಗ್-5 (ಟೈಪ್-ಎ) ಮತ್ತು ಕ್ಲಬ್‌ಹೌಸ್" ಕಟ್ಟಡಗಳಿಗೆ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ನೀಡಲು ಕೋರಿರುತ್ತೀರಿ.

ಉಲ್ಲೇಖ (4) ಈ ಪ್ರಾಧಿಕಾರದ ಪತ್ರದಲ್ಲಿ ಸ್ವಾಧೀನಾನುಭವ ಪ್ರಮಾಣ ಪತ್ರ ನೀಡುವ ಸಂಬಂಧ ಶುಲ್ಕ ಪಾವತಿಸಲು ತಿಳಿಸಲಾಗಿದ್ದು, ಅದರಂತೆ ಉಲ್ಲೇಖ (5) ರ ಮನವಿಯೊಂದಿಗೆ ಅರ್ಜಿದಾರರು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬೆಂಗಳೂರು ಸರ್ವಿಸ್ ಶಾಖೆ, ಬೆಂಗಳೂರು ಇಲ್ಲಿನ ಡಿ.ಡಿ. ಸಂಖ್ಯೆ 748808 ರಲ್ಲಿ ರೂ. 28,650/-, ಡಿ.ಡಿ. ಸಂಖ್ಯೆ 748794 ರಲ್ಲಿ ರೂ. 13,450/-, ಡಿ.ಡಿ. ಸಂಖ್ಯೆ 748795 ರಲ್ಲಿ ರೂ. 13,450/- ಮತ್ತು ಡಿ.ಡಿ. ಸಂಖ್ಯೆ 748740 ರಲ್ಲಿ ರೂ. 3,999/- ಗಳಂತೆ ಶುಲ್ಕಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ. ಆದ್ದರಿಂದ ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ಅನುಮೋದಿತ ಸಮೂಹ ವಸತಿ ಅಭಿವೃದ್ಧಿ ನಕ್ಷೆಯಲ್ಲಿನ ಪ್ರದೇಶದಲ್ಲಿನ "ಬಿಲ್ಡಿಂಗ್-3 (ಟೈಪ್-ಸಿ), ಬಿಲ್ಡಿಂಗ್-4 (ಟೈಪ್-ಎ), ಬಿಲ್ಡಿಂಗ್-5 (ಟೈಪ್-ಎ) ಮತ್ತು ಕ್ಲಬ್‌ಹೌಸ್" ಕಟ್ಟಡಕ್ಕೆ ಮಾತ್ರ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ನೀಡಲಾಗಿರುತ್ತದೆ.

### ನಿಬಂಧನೆಗಳು

1. ಜಮೀನು ಮತ್ತು ಕಟ್ಟಡವನ್ನು ಈ ಪತ್ರದಲ್ಲಿ ನಮೂದಿಸಿರುವ ಭೂ ಉಪಯೋಗಕ್ಕಾಗಿ ಮಾತ್ರ ಉಪಯೋಗಿಸತಕ್ಕದ್ದು.
2. ಪ್ರಮಾಣ ಪತ್ರವು ಕರ್ನಾಟಕ ನಗರ ಮತ್ತು ಗ್ರಾಮೀಣ ಯೋಜನಾ ಅಧಿನಿಯಮಕ್ಕೆ ಸೀಮಿತವಾಗಿರುತ್ತದೆ. ಪ್ರಾರಂಭಿಕ ಪ್ರಮಾಣ ಪತ್ರದಲ್ಲಿ ಉಲ್ಲೇಖಿಸಿರುವ ಷರತ್ತುಗಳನ್ನು ಪರಿಪಾಲಿಸತಕ್ಕದ್ದು.

3. ಕಟ್ಟಡದ ಮತ್ತು ಯಾವುದೇ ಅಬಿವೃದ್ಧಿಯ ತಳಪಾಯ, ಅಗ್ನಿಶಾಮಕ ವ್ಯವಸ್ಥೆ ಹಾಗೂ ಇತರ ಭದ್ರತಾ ವ್ಯವಸ್ಥೆಗಳು ಅರ್ಜಿದಾರರೇ ಸಂಪೂರ್ಣ ಜವಾಬ್ದಾರರಾಗಿರತಕ್ಕದ್ದು. ಈ ಸಂಬಂಧ ಯಾವುದೇ ಅನಾಹುತಗಳಿಗೆ ಈ ಯೋಜನಾ ಪ್ರಾಧಿಕಾರವು ಬದ್ಧವಾಗಿರುವುದಿಲ್ಲ.

4. ಈ ಸ್ವಾಧೀನಾನುಭವ ಪ್ರಮಾಣ ಪತ್ರ ನೀಡಿರುವ ಮಾತ್ರಕ್ಕೆ ಯಾವುದೇ ನಾಗರೀಕ ಸೌಲಭ್ಯವನ್ನು ಅರ್ಜಿದಾರರಿಗೆ ನೀಡುವ ಹೊಣೆಗಾರಿಕೆ ಪ್ರಾಧಿಕಾರಕ್ಕಿರುವುದಿಲ್ಲ.

5. ಕಟ್ಟಡದ ಮುಂಭಾಗದ ರಸ್ತೆಯನ್ನು ಅಭಿವೃದ್ಧಿದಾರರೇ ಅಭಿವೃದ್ಧಿ/ನಿರ್ವಹಣೆ ಮಾಡತಕ್ಕದ್ದು.

6. ಅಭಿವೃದ್ಧಿ ಯೋಜನೆಯ ಆಕ್ಸೆಸ್‌ಗಳಲ್ಲಿ ಸೌರಶಕ್ತಿಯ ವಿದ್ಯುತ್ ಅನ್ನು ಅಳವಡಿಸಿ ಉಪಯೋಗಿಸತಕ್ಕದ್ದು.

7. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ/ಸಾರ್ವಜನಿಕರಿಂದ ಆಕ್ಷೇಪಣೆಗಳು ವ್ಯಕ್ತವಾದಲ್ಲಿ ಈಗ ನೀಡಿರುವ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಹಿಂದಕ್ಕೆ ಪಡೆಯುವ ಷರತ್ತಿಗೊಳಪಟ್ಟಿರುತ್ತದೆ.

8. ಅಭಿವೃದ್ಧಿ ನಕ್ಷೆಯಲ್ಲಿನ ಉಳಿದ ಕಟ್ಟಡಗಳಿಗೆ ಸಹ ನಿಯಮಾನುಸಾರ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪತ್ರವನ್ನು ಪಡೆಯತಕ್ಕದ್ದು.

9. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರಿಂದ ಅಗತ್ಯ (Consent For Operation) ನಿರಾಕ್ಷೇಪಣಾ ಪತ್ರವನ್ನು ಪಡೆದು ವಾರ್ಷಿಕವಾಗಿ ಮಂಡಳಿಯಿಂದ ನವೀಕರಿಸಿಕೊಳ್ಳತಕ್ಕದ್ದು ಹಾಗೂ ಮಂಡಳಿ ವಿಧಿಸುವ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

10. ಅರ್ಜಿದಾರರು ಸಲ್ಲಿಸಿರುವ ಮಾಹಿತಿ/ದಾಖಲಾತಿಗಳು ಸುಳ್ಳು ಅಥವಾ ಪೋರ್ಜರಿಯಾಗಿದ್ದಲ್ಲಿ ಈ ಪ್ರಾಧಿಕಾರದಿಂದ ನೀಡಿರುವ ಪ್ರಮಾಣ ಪತ್ರವು ತಂತಾನೆ ರದ್ದಾಗುತ್ತದೆ.

MANAGING DIRECTOR
PROVIDENT HOUSING LIMITED
No. 6.16/12
Date 21/5/...

17/5

**ನಗರ ಮತ್ತು ಗ್ರಾಮಾಂತರ ಯೋಜನಾ**
**ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ,**
ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ

**ಇವರಿಗೆ:**

**ಶ್ರೀ ನಾನಿ ಆರ್. ಚೋಕ್ಸಿ,** ಅಥರೈಸಡ್ ಸಿಗ್ನೇಟರಿ
ಮೆ॥ ಪುರುವಾಂಕರ ಕನ್‌ಸ್ಟ್ರಕ್ಷನ್ಸ್,
ನಂ. 130/1, ಹಲಸೂರು ರಸ್ತೆ,
ಬೆಂಗಳೂರು 560 042